AKSHARASURYA
E-ISSN: 2583-620X
Peer-Reviewed, Multi Lingual E-Journal
Volume – 02, Issue – 03, March 2023.

# ಸರ್ವಕಾಲಕ್ಕೂ ಸಲ್ಲುವ ದಮನಿತರ ಮೂಕನಾಯಕ 'ಏಕಲವ್ಯ'.

**ಆರ್. ಪಿ. ಮಂಜುನಾಥ್. ಬಿ. ಜಿ. ದಿನ್ನೆ.**[1]
ರಂಗ ಸಂಶೋಧನಾ ವಿದ್ಯಾರ್ಥಿ
ಪ್ರದರ್ಶನ ಕಲಾ ವಿಭಾಗ, ಬೆಂ.ವಿ.ವಿ.

**ಪ್ರೊ. ನಾಗೇಶ್ ವಿ. ಬೆಟ್ಟಕೋಟೆ**[2]
ಪ್ರಾಧ್ಯಾಪಕರು, ಪ್ರದರ್ಶನ ಕಲಾ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**"ಕವನಗಳನ್ನು ನಾ ಬರೆಯಲು**
**ಆಶ್ರಯಿಸಿದೆ ನಿನ್ನ**
**ನಗೆ ಚಿಮ್ಮಿಸಿ ಬಾರೆನ್ನುತ**
**ನೀನಪ್ಪಿದೆ ನನ್ನ"**

ಕನ್ನಡ ಸಾಹಿತ್ಯ ಪ್ರಕಾರದಲ್ಲಿ 'ದಲಿತ ಸಾಹಿತ್ಯ' ಇವರನ್ನು ಅಪ್ಪಿದಷ್ಟು, ಮತ್ತೂ ಇವರು ಅಪ್ಪಿದಷ್ಟು ಮತ್ಯಾರು ಅಪ್ಪಿಕೊಳ್ಳಲು ಸಾಧ್ಯವಾಗಲಿಲ್ಲ. ಅಂತೆಯೇ ಡಾ. ಸಿದ್ಧಲಿಂಗಯ್ಯನವರನ್ನು'ದಲಿತ ಕವಿ' ಎಂದೇ ಬಿಂಬಿಸಲಾಯಿತು. ಇಂತಹ ಮಹಾನ್ ಪ್ರಭೆಯೊಂದು ಉದಯಿಸಿದ್ದು ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿನ ಮಂಚನಬೆಲೆ ಎಂಬಲ್ಲಿ, ಅದು ದೇವಯ್ಯ ಮತ್ತು ವೆಂಕಟಮ್ಮರ ಮಗನಾಗಿ ಕ್ರಿ.ಶ. 1954 ಫೆಬ್ರವರಿ 02 ರಂದು. ಮಾಗಡಿಯ ಹೊಸಹಳ್ಳಿಯ ಬಿಸಿಲಮ್ಮನ ಗುಡಿಯಲ್ಲಿ ಅಕ್ಷರಾಭ್ಯಾಸ ಪ್ರಾರಂಭಿಸಿದ ಸಿದ್ಧಲಿಂಗಯ್ಯನವರು 1974ರ ವರ್ಷದಲ್ಲಿ ಬೆಂಗಳೂರಿನ ಸರಕಾರಿ ಕಲಾ ಕಾಲೇಜಿನಿಂದ ಬಿ.ಎ. ಆನರ್ಸ್ (ಐಚ್ಛಿಕ ಕನ್ನಡ) ಪದವಿಯನ್ನು ಪಡೆದರಲ್ಲದೆ. 1976ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಪ್ರೊ. ಡಿ. ಎಲ್. ನರಸಿಂಹಾಚಾರ್ಯರ ಸ್ವರ್ಣಪದಕದೊಂದಿಗೆ ಪ್ರಥಮ ಶ್ರೇಣಿಯಲ್ಲಿ ಎಂ.ಎ. ಪದವಿಯನ್ನೂ, ಪ್ರೊ. ಜಿ. ಎಸ್. ಶಿವರುದ್ರಪ್ಪನವರ ಮಾರ್ಗದರ್ಶನದಲ್ಲಿ 'ಗ್ರಾಮದೇವತೆಗಳು' ಎಂಬ ಪ್ರೌಢ ಪ್ರಬಂಧವನ್ನು ಮಂಡಿಸಿ 1989ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನು ಗಳಿಸಿದವರಾಗಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಕಾರ್ಯನಿರ್ವಹಿಸಿದ ಸಿದ್ಧಲಿಂಗಯ್ಯನವರು, ಪ್ರಾಧ್ಯಾಪಕರಾಗಿ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ವಿದ್ಯಾರ್ಥಿದೆಸೆಯಿಂದಲೇ ಸಮಾಜದಲ್ಲಿನ ಅಸಮಾನತೆಗಳ ಬಗ್ಗೆ ತಮ್ಮೊಳಗೆ ಮೊಳೆಯುತ್ತಿದ್ದ ಸಿಟ್ಟು, ಆಕ್ರೋಶಗಳನ್ನೂ ವ್ಯಕ್ತಿಪಡಿಸಲು ಇವರು ಆಯ್ದುಕೊಂಡದ್ದು ಕಾವ್ಯ ಮಾಧ್ಯಮ. 'ಹೊಲೆಮಾದಿಗರ ಹಾಡು' 1975ರಲ್ಲಿ ಪ್ರಕಟಗೊಂಡ ಮೊದಲ ಕವನ ಸಂಕಲನ. ಮುಂದೆ ಅವರ 'ಸಾವಿರಾರು ನದಿಗಳು', 'ಕಪ್ಪುಕಾಡಿನ ಹಾಡು', 'ಮೆರವಣಿಗೆ', 'ನನ್ನ ಜನಗಳು ಮತ್ತು ಇತರ ಕವಿತೆಗಳು', 'ಪಂಚಮ ಮತ್ತು ನೆಲಸಮ', 'ಏಕಲವ್ಯ' ಪ್ರಮುಖ ನಾಟಕಗಳಾದರೆ 'ಅವತಾರಗಳು' ಪ್ರಬಂಧ ಕೃತಿ. ಇವಲ್ಲದೆ ರಸಗಳಿಗೆಗಳು, ಎಡಬಲ, ಹಕ್ಕಿನೋಟ, ಜನಸಂಸ್ಕೃತಿ, ಉರಿಕಂಡಾಯ ಮುಂತಾದ ಲೇಖನ ಸಂಗ್ರಹಗಳು ರಚನೆಯಾಗಿವೆ. ಇದಲ್ಲದೇ ಮುಖ್ಯವಾಗಿ ಇವರ 'ಊರು ಕೇರಿ' ಆತ್ಮಕಥೆ ಇಂಗ್ಲಿಷ್ ಹಾಗೂ ತಮಿಳಿಗೂ ಅನುವಾದವಾಗುವ ಮೂಲಕ ಇವರ ವ್ಯಕ್ತಿ ಚರಿತ್ರೆಯ ಮುಖಪುಟಗಳು ವಿಶ್ವವ್ಯಾಪಿ ಅನಾವರಣಗೊಂಡವು. ಇವರ ಸಾಹಿತ್ಯ ಸಹೃದಯಿ ಓದುಗರನ್ನು ಕಾಡುವುದಲ್ಲದೇ ಅತಿಯಾಗಿ ಪ್ರೇಮಿಸುವಂತೆ ಪ್ರೇರೆಪಿಸುತ್ತದೆ. ಅದಕ್ಕೆ ನಿದರ್ಶನವೆಂದರೆ 'ಏಕಲವ್ಯ' ನಾಟಕ.

ಪುರಾಣ ಕಾಲದ ದಮನಿತ ಕಥಾವಸ್ತುವೊಂದನ್ನು ಕುವೆಂಪುರವರು 'ಬೆರಳ್ಗೆ ಕೊರಳ್' ಎಂಬ ನಾಟಕದ ಮೂಲಕ ಸಾರ್ವತ್ರಿಕತೆಯನ್ನು ಸಾರುತ್ತಾರೆ. ಆದರೆ ಜಾತಿ ತಾರತಮ್ಯದ ಶೋಷಣೆಯ ತುಳಿತಕ್ಕೆ ಒಳಗಾದ ಸಿದ್ದಲಿಂಗಯ್ಯನವರು ಸ್ವತಃ ತಮ್ಮ ಬದುಕಿನ ಚಿತ್ರಣವನ್ನು ಏಕಲವ್ಯನ ಮೂಲಕಕಟ್ಟಿಕೊಡುತ್ತಾ ಸಾಗುತ್ತಾರೆ. "ಹಸಿವಿನಿಂದ ಸತ್ತೋರು, ಸೈಜುಗಲ್ಲು ಹೊತ್ತೋರು, ಒದೆಸಿಕೊಂಡು ಒರಗಿದೋರು ನನ್ನ ಜನಗಳು" ಎಂದು ಹೇಳುವ ಇವರಿಗೆ ತಮ್ಮ ಶೋಷಿತ ಜನರ ಕಲ್ಯಾಣಕ್ಕೆ ಪೂರಕವಾಗಿ ನಿಲ್ಲದದಾಗ "ಬಾಗಿದ ಬಿಲ್ಲೇ, ಬೆಂಡಾದ ಬಾಣವೇ, ಸೋತ ಕೈಯೇ... ಕೆರಳಿದ ಕಾಡೇ ನಾನು ಮಾಡಿದ ತಪ್ಪೇನು? ನನ್ನ ಜನಕೆ ನಾನೇನು ಹೇಳಲಿ?" ಎಂಬ ಅನೇಕ ನಿರಾಶಾವಾದಗಳಿಂದಲೇ ಇವರ ದಲಿತರ ಪರವಾದ ಮನೋಧೋರಣೆ ಎದ್ದು ತೋರುತ್ತದೆ. ಆ ಮೂಲಕ ಏಕಲವ್ಯ ಶೋಷಿತವರ್ಗದ ಬಿಂಬವಾದರೆ, ಸಿದ್ದಲಿಂಗಯ್ಯನವರು ಅದೇ ವರ್ಗದ ಪ್ರತಿಬಿಂಬವೆನ್ನಬಹುದು. ಇನ್ನೂ ಏಕಲವ್ಯ ಸರ್ವಕಾಲಕ್ಕೂ ಸಲ್ಲುವ ದಮನಿತರ ಮೂಕನಾಯಕ. ಈ ನಾಟಕದಲ್ಲಿ ನಾಯಕನ ಪಾತ್ರವನ್ನು, ಅವನ ತಳಮಳಗಳನ್ನು ಯಾವ ವೈಭವೀಕರಣಗಳಿಲ್ಲದೇ ತುಂಬಾ ಸರಳವಾಗಿ ಅವನ ಭಾವಕ್ಕನುಗುಣವಾಗಿ ಚಿತ್ರಿಸುತ್ತಾ ಸಾಗಿದ್ದಾರೆ. ಇಲ್ಲಿನ ಪ್ರತಿಯೊಂದು ದೃಶ್ಯಗಳು ಎಲ್ಲೂ ನಿರಸವನ್ನುಂಟು ಮಾಡದೇ ಓದುಗನ ಆಸಕ್ತಿಯಲ್ಲಿ ನಿರಂತರತೆಯನ್ನು ಕಾಪಾಡುತ್ತವೆ.

ಸೊಕ್ಕಿದವರ ಸುಟ್ಟು ಹಾಕಿದ
ಮುದಿ ಹಕ್ಕಿ ಮರಿಮಾಡಿ ಸತ್ತಾಗ
ಮರಿಗಳ ಮಕ್ಕಳಂತೆ ಸಾಕಿದ

ಏಕಲವ್ಯನಿಗೆ ತನ್ನ ಜೀವಾಳವಾದ ಕಾಡಿನಲ್ಲಿ ಕೂಳುಬಾಕ ನರರ ವರ್ತನೆಗಳಿಗೆ ಹಂಜಿದ ಖಗಮೃಗಗಳ ನರಕರೋಧನವನ್ನು ಆಲಿಸುತ್ತಲೇ 'ಇವನ್ನು ಕಾಪಾಡಲಾರನೇ? ಕಾಡಿನಲ್ಲಿರುವ ಎಲ್ಲ ತೋಳಗಳನ್ನೂ ನಿರ್ನಾಮಮಾಡಿ ಬಿಡುವ ಶಕ್ತಿ ನನ್ನ ತೋಳಿಗೆ ಬರಲಾರದೇ?' ಎಂದು ಚಿಂತಿಸುತ್ತಿದ್ದ, ಕೊರಗುತ್ತಿದ್ದ. ಇದನ್ನು ಕಂಡ ತಾಯಿ ಚರ್ಮಕ್ಕಂಟಿದ್ದ ಬಿಲ್ವಿದ್ಯೆಯಲ್ಲಿ ಪರಾಂಗತನಾಗಲು ತನ್ನ ಬಚ್ಚೂವನ್ನು ಗುರು ದ್ರೋಣರ ಬಳಿಗೆ ಒಲ್ಲದ ಮನಸ್ಸಿನಿಂದಲೇ ಕಳುಹಿಸಿತ್ತಾಳೆ.

'ಕಾಡಿನ ತೊರೆಯು ಕಡಲ ಸೇರುವ ತೆರದಿ' ಏಕಲವ್ಯ ಬಿಲ್ಲೋಜರ ಬಳಿಗೆ ಬರುತ್ತಾನೆ. ಆದರೆ "ಅಸಮಾನತೆ ನಿಸರ್ಗದಷ್ಟೇ ಸಹಜ. ಮರಗಳ ಎತ್ತರ, ಬಂಡೆಗಳ ಗಾತ್ರ ಏಕತಮವಾಗಿಲ್ಲ. ಹಾಗಾಗಿ ಶೂದ್ರರಿಗೆ ಗುರು ಮುಖೇನ ವಿದ್ಯೆ ದೊರೆಯಲಾರದು" ಎಂದು ಜಾತಿನಿಂದಕವಾಗಿ ವಿದ್ಯಾದಾನ ಮಾಡದ

ಗುರುಗಳ ಅಸಹಾಯಕತೆ ಮತ್ತು "ಬೇಡ ಜಂತು, ಕೀಳು ಕುಲದ ಕುನ್ನಿ" ಎಂದು ಹೀಯಾಳಿಸಿದ ನುಡಿಗಳಿಂದ ಬೇಸತ್ತ ಏಕಲವ್ಯ "ಇಷ್ಟಕ್ಕೆಲ್ಲಾ ಕೀಳು ಕುಲದಲ್ಲಿ ಹುಟ್ಟಿದ ಪಾಪಕ್ಕೆ ನಾನೇ ಕಾರಣ, ನನ್ನ ಜನ್ಮಕ್ಕೆ ಧಿಕ್ಕಾರವಿರಲಿ. ಕಲಿಕೆಯ ಹೆಚ್ಚುಗಾರಿಕೆಯ ಆಸೆ ಹೊತ್ತಿಸಿದ ನನ್ನ ಜ್ಞಾನದಾಹಕ್ಕೆ ಧಿಕ್ಕಾರವಿರಲಿ" ಎಂದು ನಿರಾಶಭಾವದಿ ಕಾಡಿಗೆ ಹಿಂದಿರುಗುತ್ತಾನೆ.

ಅಲ್ಲದೇ "ಕಾಡಿನಲ್ಲಿ ವೀರನಾದವ ನಾಡಿನ ಜನರಿಗೆ ಬೇಡದವನಾಗುತ್ತಾನೆ. ಕೀಳು ಕುಲದ ಕಳಂಕ ಆಕಾಶಕ್ಕಿಂತಲೂ ಅಗಾಲವಾದದ್ದು, ಭೂಮಿಗಿಂತಲೂ ಭಾರವಾದದ್ದು. ನಾನು ಜಗತ್ತಿನ ಸುಂದರ ಸಂಗತಿಗಳಿಂದ ದೂರವಾದವನು. ಲೋಕದಲ್ಲಿ ನಾನೀಗ ಅಸಹಾಯಕ" ಎಂದು ತಲೆಯ ಮೇಲೆ ಕೈಹೊತ್ತು ಕುಳಿತ ಏಕಲವ್ಯನಿಗೆ "ಅಸಹಾಯಕತೆಯೇ ಜಗತ್ತನ್ನೂ, ನಮ್ಮ ಗತಿಯನ್ನೂ ನಿರ್ಧರಿಸೋ ಪ್ರಬಲ ಶಕ್ತಿ. ಚಿಂತಿಬೇಡ ಮನಸ್ಸಿದ್ದಲ್ಲಿ ಮಾರ್ಗವಿದೆ. ಬಿಲ್ವಿದ್ದೆ ಕೇವಲ ವಿನಾಶಕಲ್ಲ, ಬದಲಾಗಿ ಸೃಷ್ಠಿಯ ರಕ್ಷಣೆ ಮತ್ತು ಪೋಷಣೆಗಾಗಿ ಎಂಬುವುದನ್ನು ನಿನ್ನ ನೋಡಿ ತಿಳಿದೆನು. ಬಿಲ್ವಿದ್ದೆ ರಾಜಕುಮಾರರಿಗೆ ಬಾಹುಬಲದ ಪ್ರದರ್ಶನಕ್ಕಾದರೆ, ನಿನ್ನಂತವರಿಗೆ ಲೋಕ ಕಲ್ಯಾಣದ ಸಾಧನ" ಎಂಬ ಅಶ್ವತ್ಥಾಮನ ಪ್ರೇರಕ ನುಡಿಗಳನ್ನು ಮತ್ತು "ಶ್ರದ್ಧೆಯಿರುವ ನಿನ್ನಂತ ಶಿಷ್ಯರಿಗೆ ವಿದ್ಯೆ ಕಲಿಸುವ ಮನಸ್ಸಿದ್ದರೂ ನಾನು ಅಸಹಾಯಕ"ಎಂಬ ಬಿಲ್ಲೋಜರ ವಾಗ್ದಾನ ಕೇಳಿ 'ಹಸಿರು ಹಬ್ಬಿ ಬಂತು, ಮೆಳೆಗಳ ಮೇಲೆ ನಗೆಯು ಚಿಮ್ಮಿತು, ಹೂವು ಅರಳಿ ನಿಂತ' ಹಾಗೆ ತುಂಬು ಉತ್ಸಾಹದ ಮೂಲಕ ಗುರುಗಳನ್ನು ಮನದಲ್ಲೇ ಆವಿರ್ಭವಿಸಿಕೊಂಡು ಅವರ ಮೂರ್ತಿಯ ಎದುರಲ್ಲೇ 'ಗುರು ನಿನ್ನ ಹೆಸರನು ಮನದಲಿ ನೆನೆಯುವೆ ಕರುಣಾಸಾಗರ ಮೂರ್ತಿ ಉದ್ಧರಿಸಯ್ಯೊ ನನ್ನ ಮಾನಾಭಿಮಾನ ನಿನ್ನದು ಗುರುವೇ' ಎಂದು ಅಭ್ಯಾಸಿಸುತ್ತಲೇ ಪ್ರಚಂಡ ಬಿಲ್ವಿದ್ಯೆ ಸಂಪನ್ನನಾಗುತ್ತಾನೆ.

ಇನ್ನೊಂದೆಡೆ "ಜಗತ್ತಿನ ಅನೇಕ ಕೊಲೆ ಸುಲಿಗೆಗಳಿಗೆ ರಕ್ತಪಾತಕ್ಕೆ, ಅಗಣಿತವಾದ ಅಂಗವಿಕಲತೆಗೆ, ಅಸಂಖ್ಯಾತ ವೈಧವ್ಯಕೆ, ನಿರ್ದಯವಾದ ಕಿಚ್ಚಿಗೆ, ದಾಯಾದಿಗಳ ಕಗ್ಗೊಲೆಗೆ, ಬಂಧುಗಳ ನಡುವಿನ ಹತ್ಯೆಗೆ ಆಯುಧಗಳ ತಯಾರಿಕೆಗೆ ಇಂಬು ಕೊಂಡಲಿರುವವನು ನಾನೇ" ಎಂಬ ದ್ರೋಣರ ಅಪರಾಧಿಭಾವಕ್ಕೆ, ಭೀಷ್ಮರು "ಚಡಪಡಿಸಬೇಡಿ ಆಚಾರ್ಯ! ಲೋಕ ಕಲ್ಯಾಣಕ್ಕಾಗಿ ಅನಿವಾರ್ಯವಾದ ದುರಂತವೊಂದರ ಸಂಭವಕ್ಕಾಗಿ ನಾವೆಲ್ಲ ದುಡಿಯುತ್ತಿದ್ದೇವೆ. ಈ ಲೋಕವ್ಯವಸ್ಥೆಯನ್ನು ಕಿಂಚಿತ್ತೂ ಊನವಾಗದಂತೆ ಕಾಪಾಡುವುದಕ್ಕಿಂತ ಮಿಗಿಲಾದ ಲೋಕ ಕಲ್ಯಾಣ ಬೇರೊಂದಿಲ್ಲ. ಅಲ್ಲದೇ ಮರ ಗಿಡಗಳಲ್ಲಿ, ಖಗಮೃಗಗಳಲ್ಲಿ, ಮನುಷ್ಯರಲ್ಲೂ ಇರುವ ತರತಮ ಸಂಬಂಧವನ್ನು ಉಳಿಸಿಕೊಂಡು ಹೋಗುವುದೇ ನಮ್ಮೆಲ್ಲರ ಜವಾಬ್ದಾರಿ" ಎಂಬ ನುಡಿಗಳ ಮೂಲಕ ಅಂತರಾವಲೋಕನದ ಮೂಲಕ ಪರಿವರ್ತನೆಗೊಳ್ಳುವ ಪ್ರತಿಯೋರ್ವನಿಗೂ ಪ್ರತಿಯಾಗಿ ಮತ್ತೊಂದು ಪ್ರೇರಕದಿಂದ ಯಥಾವತ್ತತೆಗೆ ಮರಳುವಂತೆ ಮಾಡುವ ಅನೇಕ ಸಂದರ್ಭಗಳನ್ನು ಕಾಣಬಹುದು. ಇದೇ ಕೆಲಸ ಕುರುಕ್ಷೇತ್ರ ಯುದ್ಧಕಾಲದಲ್ಲಿ ಕೃಷ್ಣಾರ್ಜುನರ ಸಾಂಗತ್ಯದಿಂದ ಭಗವದ್ಗೀತೆ ಉದಿಸಿದ ಕಥೆಯನ್ನು ಇಲ್ಲಿ ಉದಾಹರಿಸಬಹುದು.

ಗುರುಶಕ್ತಿ ಮತ್ತು ಶಿಷ್ಯಭಕ್ತಿಯ ನಡುವಿನ ಪರೀಕ್ಷೆಯನ್ನು ತಂದೊಡ್ಡುವ ಪ್ರಸಂಗವೂ ಅರ್ಜುನನ ಹೆಸರಲ್ಲಿ ಏರ್ಪಡುತ್ತದೆ. ಇದರ ಬೆನ್ನಲ್ಲೇ ಗುರುವಚನ ಹಾಗೂ ಗುರುವಿನ ಆದರ್ಶಗಳು ಗುರು ದ್ರೋಣರನ್ನು ಕಳಂಕದ ಕೂಪಕ್ಕೆ ತಳ್ಳಿಬಿಡುತ್ತವೆ. ವಾಸ್ತವವಾಗಿ ಏಕಲವ್ಯನ ಕಲಿಕೆಗೆ ಪೂರಕವಾಗಿ ಯಾವುದೇ ಕಾರ್ಯಗಳು ದ್ರೋಣರಿಂದ ನಡೆಯದಿದ್ದರೂ, ಏಕಲವ್ಯ ಇಡೀ ಭೂಮಂಡಲದ ಶ್ರೇಷ್ಠ ಧನುರ್ವಿದ್ಯೆಯನ್ನು ಸ್ವಶಕ್ತಿಯಿಂದ ಗಳಿಸಿದ್ದರೂ ತನ್ನ ಗುರು ದ್ರೋಣರೇ ಎಂದು ಹೇಳಿಕೊಳ್ಳುವ ಮತ್ತು ತಾವೂ ಗುರುಗಳು ಎಂದು ಒಪ್ಪಿಕೊಳ್ಳುವ ಮನಸ್ಥಿತಿ ಗುರು-ಶಿಷ್ಯರನ್ನುಇಕ್ಕಟ್ಟಿಗೆ ಸಿಲುಕಿಸುತ್ತದೆ. ಏಕಲವ್ಯನ ಶ್ರದ್ಧೆ ಮತ್ತು ಪರಿಶ್ರಮವನ್ನು ಹೊಗಳಿದ ದ್ರೋಣರನ್ನು ಕುರಿತು "ಗುರುಗಳೇ ನಿಮ್ಮ ಧನ್ಯತೆಯಲ್ಲಿ ಕೊಟ್ಟ ಮಾತಿಗೆ ತಪ್ಪಿದ ಪಾತಕ ಇರುವುದನ್ನು ಮರೆತಿದ್ದೀರಿ" ಎಂಬ ನುಡಿಗಳ ಮೂಲಕ ಏಕಲವ್ಯ ಮತ್ತು ದ್ರೋಣರನ್ನು ಕುಕೃತ್ಯಕ್ಕೆ ಪ್ರಚೋದಿಸುತ್ತಾನೆ. ಅವನೆಣಿಸಿದಂತೆ ಏಕಲವ್ಯ "ಗುರುವಿನ ಗೌರವ ಕಾಯುವುದಕ್ಕಿಂತ ದೊಡ್ಡ ಸುಖವಿಲ್ಲ" ಎಂದು ವಚನಕ್ಕೆ ಕಟ್ಟುಬಿದ್ದು, ಮಾನವೀಯತೆಯನ್ನು ಮಾರಿ ದ್ರೋಣರು ಬೇಡಿದ ಗುರುದಕ್ಷಿಣೆಯಾಗಿ 'ಹೆಬ್ಬಂಡೆ ಮೇಲೆ ತನ್ನ ಹೆಬ್ಬೆರಳ ಕತ್ತರಿಸಿ ಗುರುವಿಗೆ ಕೊಡುವ ಮೂಲಕ ಏಕಲವ್ಯ ಇಡೀ ತನ್ನ ಬಾಳನ್ನೇ ಧಾರೆಯೆರೆಯುತ್ತಾನೆ. ಇದೇ ದೃಶ್ಯದ ಮೂಲಕ ಉಳ್ಳವರ ಬದುಕಿನ ಹಣತೆಗಳಿಗೆ ಇಲ್ಲದವರು ಬತ್ತಿಯಾದ, ತೈಲವಾದ ಕಥೆಗಳನ್ನು ಸಿದ್ದಲಿಂಗಯ್ಯನವರು ಸಮೀಕರಿಸುತ್ತಾರೆ.

ಇತ್ತ ಏಕಲವ್ಯ 'ಉಳ್ಳವರ ಮತ್ತು ಇಲ್ಲದವರ ನಡುವಿನ ಆಕಾಂಕ್ಷೆಗಳ ಕಾಳಗದಲ್ಲಿ' ರೆಕ್ಕೆ ಕತ್ತರಿಸಿದ ಹಕ್ಕಿಯಾದ, ನೀರು ತೊರೆದು ಅರೆಕ್ಷಣದ ಬದುಕಿಗಾಗಿ ಸೆಣಸಾಡುವ ಜಲಚರವಾಗಿ ಹೋದ. ಇದಲ್ಲದೇ ಯಾವ ಹುಲಿಯನ್ನು ಬಗೆದು ತನ್ನ ಮನೆಯ ನಾಯಿಯನ್ನಾಗಿಸಿಕೊಂಡಿದ್ದನೋ ಅದೇ ಎರಗಿ ಬಂದರೂ ಅದರಿಂದ ಪಾರಾಗಲೂ ಬೇಕಾದ ಅಲ್ಪಶಕ್ತಿಯೂ ಇಲ್ಲದವನಾದ. ಮಗನ ಪರಿಸ್ಥಿತಿಯನ್ನು ಗಮನಿಸಿದ ತಾಯಿಯ ರೋಧನವಂತೂ ಓದುಗ ಪ್ರೇಕ್ಷಕರನ್ನು ಎದೆಯಿರಿಯುತ್ತದೆ. ಅದರ ಹಿಂದೆಯೇ ಏಳುವ ತಾಯಿಯ ಆಕ್ರೋಶ "ರೆಕ್ಕೆ ಸುಟ್ಟಂತ ಹಕ್ಕಿಯಾದೆ, ನಖಗಳ ಕಿತ್ತಂಥ ಸಿಂಹದ ತೆರನಾದೆ, ಶಿಷ್ಯನ ಕೊಲ್ಲುವ ಕೊಲೆಗಾರ ಗುರುವೇನೋ, ಗುರುವಿನ ಮಾತಿಗೆ ಮರುಳಾಗಿ ಹಾಳಾದೆ" ಎಂದು ಮರಗುವ ಮಮತೆ ತುಂಬಿದ ನುಡಿಗಳು ತುಂಬಾ ಮಾರ್ಮಿಕವಾಗಿ ತೋರುತ್ತವೆ. ಕವಿಗಳ ಈ ರಸವತ್ತಾದ ನುಡಿಗಳ ಬೆನ್ನಹಿಂದೆ ಸ್ವ ಅನುಭಾವಗಳ ಕೈಚಳಕ ಇಲ್ಲದಿಲ್ಲವೆಂದು ಹೇಳುವುದು ಅಸಾಧ್ಯ.

ತಾಯಿಯ ಈ ಮರುಕದ ಹಿಂದೆ ಮಗನ ಬಗೆಗೆ ತನ್ನ ತಾಯಿ ಕಟ್ಟಿದ ಕನಸಿನ ಕೋಟೆ ಕಂಡು ಹಾಗೂ ತಮ್ಮಯ ಬಾಲಿಶಗಳಿಗೆ ಇನ್ನೊಬ್ಬರ ಬಾಳನ್ನೇ ಬಲಿ ತೆಗೆದುಕೊಂಡವರ ಮಗ್ಗುಲಲ್ಲೇ ಮತ್ತೆ ಸೆಟೆದೆದ್ದು ನಿಲ್ಲಬೇಕೆಂಬ ಉತ್ಕಟಾಕಾಂಕ್ಷೆಯಿಂದಾಗಿ ಏಕಲವ್ಯ ಮತ್ತೆ 'ಆಕ್ರೋಶದಿ ಸಿಡಿದು ಬಂದು, ನವ ಚೇತನದಿ ಪುಟಿದು ನಿಂದು,ಎಡದ ಕೈಲಿ ಬಾಣ ಬಿಟ್ಟ, ಅಟವಿಯೆಲ್ಲ ನಡುಗಿಸಿಬಿಟ್ಟ'

ಸತತ 7 ದೃಶ್ಯಗಳ ಮೂಲಕ ಕಥಾನಾಯಕನ ಸುತ್ತವೇ ಸುತ್ತಾಡುತ್ತಿದ್ದ ನಾಟಕದ ಕಥೆ ಒಮ್ಮೆಲೇ ಇಬ್ಬರು ಸೈನಿಕರ ಸಂಭಾಷಣೆಯ ಮೂಲಕ ಮಹಾ ಕದನದ ಕಾರಣ-ಪರಿಣಾಮಗಳನ್ನು ತಿಳಿಸಲು ಮುಂದಾಗುವುದಲ್ಲದೇ, ಜಗತ್ತಿನ ಜನರಿಗೆ ಮತ್ತು ಯುದ್ಧ ಸನ್ನದ್ಧರಾದವರಿಗೆ ಎಚ್ಚರಿಕೆಯ ಗಂಟೆಯನ್ನು ನೀಡುತ್ತದೆ. ಈ ಮೂಲಕ ಪೌರಾಣಿಕ ಕಥಾವಸ್ತುವೊಂದನ್ನು ಪ್ರಸ್ತುತ ನೆಲೆಗಟ್ಟಿಗೆ ತಂದು ನಿಲ್ಲಿಸುವ ರಂಗ ತಂತ್ರಗಾರಿಕೆಯ ಅರಿವು ಸಿದ್ದಲಿಂಗಯ್ಯನವರಲ್ಲಿ ಮನೆಮಾಡಿದ್ದನ್ನು ಕಾಣಬಹುದು.

ನಾಟಕದ ಕೊನೆಯಲ್ಲಿ ಸುಖಾಂತವೂ ಅಲ್ಲದ ಮತ್ತು ದುಃಖಾಂತವೂ ಅಲ್ಲದ ರೀತಿಯಲ್ಲಿ ಕಥೆಯು ಒಂದು ದಡವನ್ನು ಮುಟ್ಟುತ್ತದೆ. ಇತ್ತ ಕೃಷ್ಣ "ಯುದ್ಧವೆಂದರೆ ಬರೀ ಹತ್ಯೆಯಲ್ಲ. ಸಂಧಾನವೂ ಅದರ ಒಂದು ಭಾಗ. ಕಾಳಗವೆಂದರೆ ಬರೀ ಮುನ್ನುಗ್ಗುವುದಲ್ಲ. ಅಸಹಾಯಕರಾಗಿದ್ದಾಗ ಹಿಮ್ಮೆಟ್ಟುವುದೂ, ತಪ್ಪಿಸಿಕೊಳ್ಳುವುದೂ ಒಂದು ತಂತ್ರ" ಎಂಬ ಮಾತಿನ ಮೇರೆಗೆ ಅರ್ಜುನನೂ ಹಾಗೂ "ನಿನ್ನನ್ನು ಸೂತಪುತ್ರನೆಂದಂತೆ ಏಕಲವ್ಯನನ್ನು ನಿಷಾಧ ಎಂದು ಹೀಯಾಳಿಸಿದ್ದಾರೆ. ಹಾಗಾಗಿ ಅವನ ಮನ ಓಲೈಕೆಗೆ ನೀನೆ ಸೂಕ್ತ" ಎಂಬ ದುರ್ಯೋಧನನ ನುಡಿಗಳನ್ವಯ ಕರ್ಣನೂ ಏಕಲವ್ಯನಲ್ಲಿಗೆ ಬರುತ್ತಾರೆ. ಇರ್ವರ ಪ್ರಶಂಸನೀಯ ನುಡಿಗಳಿಗೆ ಮರುಳಾಗಾದೆ "ಹಿತಾಸಕ್ತಿಯ ಕಾಳಗದಲ್ಲಿ ಹೆಬ್ಬೆರಳು ಕತ್ತರಿಸಿದ ಗಾಯ ಮಾಗಿದ್ದರೂ ಹೃದಯದಲ್ಲಾದ ಗಾಯ ಮಾಗಲು ಯುಗಗಳೇ ಬೇಕೆನಿಸುತ್ತದೆ" ಎನ್ನುವ ಏಕಲವ್ಯನ ಮಾತುಗಳಿಂದ ಶತ ಶತಮಾನಗಳಿಂದ ಅಸಹಾಯಕತೆ, ಅವಮಾನ, ತಿರಸ್ಕಾರ, ಬಹಿಷ್ಕಾರ, ಅನ್ಯಾಯ, ಶೋಷಣೆ, ದಬ್ಬಾಳಿಕೆ, ದೌರ್ಜನ್ಯಗಳನ್ನು ತಾಳಿಕೊಂಡು ಬಂದಿರುವ ಅದೆಷ್ಟೋ ದಮನಿತರ ಮೂಕರೋಧನಕ್ಕೆ ಮುಷ್ಠಿ ನೀಡುತ್ತದೆ. ಎಲ್ಲವೂಗಳ ಬಂಧನಗಳಿಂದ ಪಾರಾದವನಿಗೆ ಅವನ ಸ್ಥೈರ್ಯವೇ ಆಯುಧವೆಂಬಂತೆ ಅಧರ್ಮ ಅಳಿಸಲು ಪಾಂಡವರ ಪಕ್ಷ ಸೇರುವಂತೆ ಕೃಷ್ಣ ಮಾಡಿಕೊಂಡ ಮನವಿಗೂ ಸೊಪ್ಪಾಕದೆ "ಕುಲಧರ್ಮವನ್ನು ಕಾಪಾಡಿಕೊಳ್ಳುವುದೇ ಉದ್ದೇಶವಾಗಿರುವ ನಿಮ್ಮ ಧರ್ಮ ಉಳಿಯುವುದಕ್ಕಿಂತ ಅಳಿಯುವುದೇ ಮೇಲು" ಎಂದು ಉತ್ತರ-ರಿಸುವ ಏಕಲವ್ಯ, 'ಮಾನವೀಯ ನೆಲೆಯಲ್ಲಿ ಕಾರ್ಯಪ್ರವೃತ್ತವಾಗದಿರುವ ಧರ್ಮ ಧರ್ಮವೇ ಅಲ್ಲ' ಎನ್ನುವ ಹೊಸ ಭಾಷ್ಯವನ್ನೆ ಬರೆಯುತ್ತಾನೆ. ಅಧಿಕಾರಶಾಹಿ ವರ್ಗಗಳ ಸ್ವಾರ್ಥಪರ ಕಾರ್ಯಗಳನ್ನು ಖಂಡಿಸುತ್ತಾ "ಎಲ್ಲೆಲ್ಲೂ ಇರುವ ಅನ್ಯಾಯದ ವಿರುದ್ಧ, ಜ್ಞಾನದ ಗುತ್ತಿಗೆಯನ್ನು ಎತ್ತಿಹಿಡಿಯುವ ಶಾಸ್ತ್ರಗಳ ವಿರುದ್ಧ

ನನ್ನ ಯುದ್ಧ. ಮೇಲುಕೀಳೆಂಬ ವಂಚನೆಯನ್ನು ಅಳಿಸಲು ನನ್ನ ಸಮರ. ಉಳ್ಳವರ ನಡುವಿನ ಕಚ್ಚಾಟವಾಗಿರುವ ಕುರುಕ್ಷೇತ್ರದಲ್ಲಿ ನನ್ನದು ಇಲ್ಲದವರ ಪರವಾದ ಹೋರಾಟ" ಎಂದು ಘೋಷಿಸುವ ಏಕಲವ್ಯನ ಮಾತು ಕಡೆಗಣಿಸಲ್ಪಟ್ಟವರ ಬದುಕಿನ ತೋಟದಲ್ಲಿ ಸಮಾನತೆಯ ಹೂ ಅರಳಿಸುವ ಆಶಯಕ್ಕೆ ಕೈಗನ್ನಡಿಯಾಗಿದೆ. ಒಟ್ಟಾರೆಯಾಗಿ ಈ ನಾಟಕದ ಮೂಲಕ

ನ ಗುರೋರಧಿಕಂ ತತ್ವಂ, ನ ಗುರೋರಧಿಕಂ ತಪಃ।
ತತ್ವಜ್ಞಾನಾತ್ ಪರಂ ನಾಸ್ತಿ, ತಸ್ಮೈ ಶ್ರೀ ಗುರುವೇ ನಮಃ।

ಎಂಬ ಅನೇಕಾನೇಕ ಶ್ಲೋಕಗಳ ಮೂಲಕ ನಮ್ಮ ನಾಡಿನಲ್ಲಿ ವಿದ್ಯೆ ಕಲಿಸುವ ಗುರುಗಳು ತಮ್ಮ ಅತ್ಯುನ್ನತ ಸ್ಥಾನ ಉಳಿಸಿಕೊಂಡಿರುವ ಬೆನ್ನಲ್ಲೇ, ತಮ್ಮ ಸ್ವಾರ್ಥ ಹಿತಾಸಕ್ತಿಗಾಗಿ ಶಿಷ್ಯನ ವಿದ್ಯೆ ಮತ್ತು ಆತ್ಮಬಲದ ಆಸ್ತಿಯಾಗಿದ್ದ ಹೆಬ್ಬೆರಳನ್ನೇ ಗುರುದಕ್ಷಿಣೆ ಕೇಳುವ ಗುರುವಿಗೆ ಕೊಡುಗೆಯಾಗಿ ನೀಡಿದ ಶಿಷ್ಯ ಏಕಲವ್ಯನ ಸ್ಥಾನ ಹಿರಿದೆನಿಸುವುದು.

ದಲಿತ ಕವಿಯೆಂದು ಹೆಸರಾದ ಸಿದ್ಧಲಿಂಗಯ್ಯನವರು ಈ ನಾಟಕದ ಮೂಲಕ ನೊಂದ ಮನಸ್ಸುಗಳ ಮನೋವಿಜ್ಞಾನ ಅರಿಯುವ ಮನಃಶಾಸ್ತ್ರಜ್ಞ, ರಂಗಭೂಮಿಯ ಸೂಕ್ಷ್ಮ ರಂಗತಂತ್ರಗಾರಿಕೆಯನ್ನು ಬಲ್ಲ ರಂಗಕರ್ಮಿ, ಸಮಾಜಕ್ಕೆ ಪೂರಕವಾಗಿ ವಿವೇಚಿಸಿ ವಿವೇಕ ತುಂಬುವ ಸಾಮಾಜಿಕ ಕಳಕಳಿಯಿರುವ ನಾಯಕ ಎಂದೂ ಕರೆಯಬಹುದಾಗಿದೆ.

**ಮೂಲ ಆಕಾರಗಳು**

1. ಏಕಲವ್ಯ (ನಾಟಕ)–ಡಾ.ಸಿದ್ಧಲಿಂಗಯ್ಯ, ಅಂಕಿತ ಪ್ರಕಾಶನ, ಗಾಂಧಿ ಬಜಾರ್, ಬಸವನಗುಡಿ, ಬೆಂಗಳೂರು. ಪ್ರಕಟಣಾ ವರ್ಷ–2020 (5ನೇ ಮುದ್ರಣ)
2. ನನ್ನ ಜನಗಳು (ಕವನ ಸಂಕಲನ)–ಡಾ. ಸಿದ್ಧಲಿಂಗಯ್ಯ,ವಿಶ್ವ ಕನ್ನಡ ಸಾಹಿತ್ಯ ಮಾಲೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು. ಪ್ರಕಟಣಾ ವರ್ಷ–2010
3. ಸಿದ್ಧಲಿಂಗಯ್ಯ–ಕನ್ನಡ ಸಾಹಿತ್ಯ ಪರಿಷತ್ತು ಬ್ಲಾಗ್.